†ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ ಸರ್ಕಾರದವರು ಇದನ್ನು ಒಂದು ಸಣ್ಣ ಮಸೂದೆ ಎಂದು ವರ್ಣಿಸಿದ್ದಾರೆ. ಈ ಮಸೂದೆಯ ದುಷ್ಪರಿಣಾಮಗಳನ್ನು ಈ ಸಭೆ ಗ್ರಹಿಸಿಕೊಳ್ಳಬೇಕು, ಮತ್ತು ಸರ್ಕಾರದವರು ತಮ್ಮ ಅಧಿಕಾರಕ್ಕೆ ಧಕ್ಕೆ ಬರತಕ್ಕಂಥ ಸಮಯದಲ್ಲಿ, ದೇಶವನ್ನಾದರೂ ಬಲಿಕೊಟ್ಟು ಅವರು ಅಧಿಕಾರದಲ್ಲಿ ಉಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದು ಈ ತೆರಿಗೆ ಮಸೂದೆಯಿಂದ ಎನ್ನುವುದನ್ನು ಈ ಸಂದರ್ಭದಲ್ಲಿ ವಿವರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸಾಮಾನ್ಯವಾಗಿ ಪ್ರತ್ಯಕ್ಷ ತೆರಿಗೆಗಳು ಇಂದ್ರಜಾಲದಿಂದ ಜನಗಳಮೇಲೆ ಹೊರೆಯನ್ನು ಹಾಕುತ್ತವೆ. ಈ ಮಾರಾಟ ಕರ ಎನ್ನುವುದು ಅದಕ್ಕಿಂತ ಹೆಚ್ಚಿಗೆ ಮಹೇಂದ್ರ ಜಾಲ. ಅದು ಒಂದು ಕೋಟಿಯಿಂದ ಎರಡು ಕೋಟಿಗೆ ಆರಂಭವಾಗಿ 18 ಕೋಟಿ ರೂಪಾಯಿಗಳಿಗೆ ಬಂದು ಮುಟ್ಟಿದೆ. ಟ್ರೆಜರಿಗೆ ಬರತಕ್ಕದ್ದು 18 ಕೋಟಿ ರೂಪಾಯಿ. ಪಾನನಿರೋಧ ಜಾರಿಗೆ ತರುವುದರಿಂದ ಅಬ್ಕಾರಿ ಹೆಂಡದ ಮಾರಾಟದಿಂದ ನಷ್ಟವಾಗುವುದನ್ನು ಸರಿತೂಗಿಸಲು ಚಕ್ರವರ್ತಿ ರಾಜಗೋಪಾಲಾಚಾರ್‌ರವರು ದೇಶಕ್ಕೆ ತೆರಿಗೆ ಹಾಕಬೇಕು ಎಂದು ಸೂಚನೆ ಮಾಡಿದರು. ಇದನ್ನು ಅನೇಕ ರೀತಿಯಲ್ಲಿ ಬದಲಾವಣೆ ಮಾಡಿಕೊಳ್ಳುತ್ತಾ ಬಂದಿದ್ದೇವೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ತರುಣರು, ಉತ್ಸಾಹಶಾಲಿಗಳು. ಆದರೆ ಅನನುಭವಿಗಳು. ಅವರು ಈ ದೊಡ್ಡ ಜವಾಬ್ದಾರಿ ಹೊತ್ತಿದ್ದಾರೆ. ದೇಶದ ಆದಾಯವೆಚ್ಚವನ್ನು ಸರಿದೂಗಿಸಿಕೊಳ್ಳುತ್ತೇನೆ ಎಂದು ಹೊರಟಿದ್ದಾರೆ. ಈಗ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜು ಹಾಕುವ ಮತ್ತು ಮಾರಾಟ ಕರದಲ್ಲಿ ಕೆಲವು ತೆರಿಗೆಗಳನ್ನು ಹೆಚ್ಚಿಸುವ ರೀತಿಯಲ್ಲಿ ಒಂದು ಹನ್ನೆರಡು ಹದಿಮೂರು ಕೋಟಿ ರೂಪಾಯಿಗಳನ್ನು ಆಕರಣ ಮಾಡಿದಹೊರತು ಈ ವರ್ಷದ ಅಯವ್ಯಯ ಸರಿತೂಗಿಸುವುದಕ್ಕಾಗುವುದಿಲ್ಲ ಎಂದು ಹೊರಟಂತೆ ಕಾಣುತ್ತದೆ. ನಿಜ, ರಾಜ್ಯದ ಹಣಕಾಸಿನ ಸ್ಥಿತಿಯಲ್ಲಿ ಎದ್ದಿರತಕ್ಕ ಸ್ಥಿತಿಯನ್ನು ನಾವು ವಿಷಾದದಿಂದ ಮನಗಂಡಿದ್ದೇವೆ. ಅದಕ್ಕೆ ಕಾರಣಗಳನ್ನು ಹುಡುಕುವುದಕ್ಕೆ ಹೋಗುವುದಿಲ್ಲ.

ಸ್ವಾಮಿ, ಈವೊತ್ತು ಬೆಲೆಗಳು ಒಂದೇ ಸಮನಾಗಿ ಗಗನಕ್ಕೆ ಏರುತಾ ಇವೆ. ಅವುಗಳಮೇಲೆ ಯಾವ ಹತೋಟಿಯೂ ಇಲ್ಲ. ಸರ್ಕಾರ ಹೇಳುತ್ತಾರೆ "ವಿಲಾಸಿ ವಸ್ತುಗಳ"ಮೇಲೆ ತೆರಿಗೆ ಹಾಕುತ್ತೇವೆ" ಎಂದು. ನನಗಾದರೂ ದುಃಖವಾಗುತ್ತದೆ ಅಕ್ಕಿ ವಿಲಾಸಿ ವಸ್ತುವೇ ಎಂದು. ನಿಜ, ಬಡವರಿಗೆ ಇವೊತ್ತು ಅನ್ನ ಕಜ್ಜಾಯವಾಗಿದೆ. ಈ ದೃಷ್ಟಿಯಿಂದ ಅಕ್ಕಿ ವಿಲಾಲಿ ವಸ್ತುವಾಗಿದೆ. ದನಗಳಿಗೆ ಬೇಯಿಸಿಹಾಕುವ ನುಚ್ಚು ಮತ್ತು ಹೊಟ್ಟುಕೂಡ ಷೆಡ್ಯೂಲಿನಲ್ಲಿ ಸೇರಿಸಿದ್ದಾರೆ, ಮತ್ತು ಆಹಾರದ ವಸ್ತುಗಳಮೇಲೆ ಇದ್ದಂಥ ಒಂದು ಪರ್ಸೆಂಟು ಕರವನ್ನು ಅರ್ಧ ಪರ್ಸೆಂಟ್ ಹೆಚ್ಚಿಸಿದ್ದಾರೆ. ಹೀಗೆ ವಿಲಾಸಿ ವಸ್ತುಗಳು ಎನ್ನುವುದು ಯಾವಯಾವುವು ಇವೆ, ಅದರ ಹೆಸರಿನಲ್ಲಿ ಕುರುಡು ದೊಣ್ಣೆಬೀಸಿದಹಾಗೆ, 5—6 ಕೋಟಿ ರೂಪಾಯಿಬೇಕು ಎಂದು ಅಧಿಕಾರಿಗಳು ಮಂತ್ರಿಗಳೂ ಸೇರಿ ಕಣ್ಣುಮುಚಿಕೊಂಡು ½, 2, 3, ಪರ್ಸೆಂಟ್ ಜಾಸ್ತಿಮಾಡಿರಿ ಎಂದು ಹೇಳಿದ್ದಾರೆ.

4-00 ಪಿ.ಎಮ್.

ಇದರಲ್ಲಿ ಈಗ ಟರ್ನ್ ಓವರ್ ಟ್ಯಾಕ್ಸನ್ನು ಸೇಕಡ 2ರಿಂದ 3ಕ್ಕೆ ಏರಿಸಿ ಸೇಕಡ ಒಂದರಷ್ಟು ಹೆಚ್ಚಿಸಿದ್ದಾರೆ. ಯಾರಿಗೆ 10 ಸಾವಿರ ರೂಪಾಯಿಗಳ ವರೆಗೆ ಟರ್ನ್ ಓವರ್ ಇದೆ ಅವರೆಲ್ಲಾ ತೆರಿಗೆಕೊಡಬೇಕೆಂದು ಗೊತ್ತು

(ಶ್ರೀ ಎಸ್. ಗೋಪಾಲಗೌಡ)

ಮಾಡಿದ್ದಾರೆ. ಇದು ಬಹಳ ಉಚಿತ ಎಂದು ಹೇಳಿದರು. ಇವತ್ತಿನ ಹಣದ ಬೆಲೆ ಗಣನೆಗೆ ತೆಗೆದುಕೊಂಡರೆ ವಿಧಾನಸೌಧದ ಪಕ್ಕದಲ್ಲಿಟ್ಟಿರುವ ಬೀಡಿ ಅಂಗಡಿಯವನೂ ಕೂಡ 10,000 ರೂಪಾಯಿಗೆ ಕಡಮೆಯಿಲ್ಲದೆ ಟರ್ನ್ ಓವರ್ ಮಾಡಲೇಬೇಕು. ಇಲ್ಲದಿದ್ದರೆ ಅವನು ಬದುಕುವುದಕ್ಕೇ ಸಾಧ್ಯವಿಲ್ಲ. ಅವನ ಹೆಂಡತಿಮಕ್ಕಳು ಬದುಕಬೇಕಾದರೆ 10,000 ರೂಪಾಯಿಗಳ ಟನ್ ಓವರ್ ಮಾಡಲೇಬೇಕು. ರಾಮಕೃಷ್ಣ ಹೆಗಡೆಯವರು ಹೇಳುವಂತೆ ತಪ್ಪಿಸಿಕೊಳ್ಳುವ ಅಂಗಡಿಯವರೆಂದರೆ ರಸ್ತೆಯಮೇಲೆ ಒಡೆ-ಚಕ್ಕಲಿ ಮಾರುವವರು ಮಾತ್ರ ಎಂದು ಕಾಣುತ್ತದೆ. ಅಂಗಡಿಗೆ ಬಾಡಿಗೆ ಕೊಡುವವನು ಈಗಿನ ರೀತಿಯಲ್ಲಿ 10,000 ರೂಪಾಯಿಗಳವರೆಗೆ ಟರ್ನ್ ಓವರ್ ಮಾಡದಿದ್ದರೆ ಅವನು ತನ್ನ ಹೆಂಡಿರು ಮಕ್ಕಳನ್ನು ಬೀದಿಪಾಲು ಮಾಡಬೇಕಾಗುತ್ತದೆ. ಆದುದರಿಂದ ಈಗ ಮಾಡಿರುವುದು ಒಂದು ದೊಡ್ಡ ರಿಯಾಯಿತಿ ಎಂದು ನಾನು ಭಾವಿಸುವುದಿಲ್ಲ.

ಇನ್ನು, ಸ್ವಾಮಿ, ಬೆಲೆಗಳು ಒಂದೇ ಸಮನೆ ಏರುತ್ತಿವೆ, ಇವತ್ತು ಬಸ್ಸಿನ ಎಲ್ಲಾ ಸಾಮಾನುಗಳ ಮೇಲೂ ತಾವು ಸೇಕಡ ಎರಡರಷ್ಟನ್ನೋ ಏನೋ ಹಾಕಿದ್ದೀರಿ. ಈಗ ಟೈರು ಮತ್ತು ಬಸ್ಸಿನ ಸಾಮಾನುಗಳ ಮೇಲೆ ಮಾರಾಟ ತೆರಿಗೆ ಹಾಕಿದರೆ ಮತ್ತೊಂದುಸಲ ದೇವರಾಜ ಅರಸಿನವರು ಪ್ರಯಾಣಿಕರ ಬಸ್ ಛಾರ್ಜನ್ನು ಹೆಚ್ಚಿಸುತ್ತಾರೆ. ಇದೊಂದು ವಿಷವೃತ್ತ. ನಿಮಗೆ ಹಣಬೇಕು, ಈ ತೆರಿಗೆ ಹಾಕುತ್ತೀರಿ, ಅವರಿಗೆ ಬೇಕಾದಾಗ ಅವರು ಬೇರೆಕಡೆ ಹಾಕುತ್ತಾರೆ. ಕೊನೆಯದಾಗಿ ಇವೆಲ್ಲವೂಕೂಡ ಮನುಷ್ಯನಮೇಲೆ ಬೀಳುವುದು. ಹೀಗಾಗಿ ಅವನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬಹಳ ಹೊರೆ ಹೊರಬೇಕಾಗುತ್ತದೆ. ವಿವೇಚನೆಯಿಲ್ಲದೆ ಕಾನೂನು ಮಾಡುತ್ತಾಹೋದರೆ ಈ ಕಷ್ಟ ಬರುತ್ತದೆ. ಕೋಳಿ ಈ ದಿವಸ ದಿನಕ್ಕೆ ಒಂದು ಮೊಟ್ಟೆ ಇಡುವುದು. ಆದರೆ ಅದರ ಹೊಟ್ಟೆಯಲ್ಲಿ ನೂರಾರು ಮೊಟ್ಟೆ ಇರಬೇಕೆಂದು ಅದರ ಹೊಟ್ಟೆ ಬಗೆದರೆ ಆಮೇಲೆ ಅಷ್ಟಿಲ್ಲದೆ ವಿಷಾದಪಡಬೇಕಾಗುತ್ತದೆ. ಅದನ್ನು ತಿಳಿದುಕೊಳ್ಳಬೇಕು. ತೆರಿಗೆ ಹೇರುವುದಕ್ಕೂ ಒಂದು ಮಿತಿ ಇದೆ. ಈಗ ಅಂಕಿಸಂಖ್ಯೆಗಳ ಗೋಜಿಗೆ ಹೋಗುವುದಿಲ್ಲ, ಅದನ್ನು ನೋಡಿದರೆ ವಿಷಯ ಗೊತ್ತಾಗುತ್ತದೆ. ಕಳೆದ ಜನವರಿಯಲ್ಲಿ ಹೋಲ್‌ಸೇಲ್ ಪ್ರೈಸ್ 156 ಇದ್ದುದು ಬೆಲೆಗಳು ಏರಿ 169 ಆಗಿದೆ, ಕಳೆದ 3 ತಿಂಗಳಲ್ಲಿ ಒಂದೊಂದು ವಸ್ತುವಿನ ಬೆಲೆಯೂ 10—15—20 ಪಟ್ಟು ಏರಿದೆ ; ಜೂನ್‌ನಿಂದ 6 ತಿಂಗಳಲ್ಲಿ ಹೀಗೆ ಏರಿದೆ. ಇಂಥ ಪರಿಸ್ಥಿತಿ ಇರುವಾಗ ಹಣಬೇಕು, ನಿಜ, ಯೋಜನೆ ಕಾರ್ಯಗತ ಮಾಡಬೇಕಾಗಿದೆ. ಬಹಳ ದೊಡ್ಡ ಯೋಜನೆ ಇದೆ. ದೇಶದಲ್ಲಿರುವ ಜನ ಇಂದಿನ ಸ್ಥಿತಿಗತಿಯಲ್ಲಿ ಹೇಗೆ ಜೀವನ ನಡೆಸುತ್ತಾರೆಂಬುದೇ ಆಶ್ಚರ್ಯಕರವಾಗಿರುವಾಗ ಹಣ ಬೇಕೆಂದು ಈರೀತಿ ಮಸೂದೆಯನ್ನು ತಂದು ಎಲ್ಲ ಪದಾರ್ಥಗಳಮೇಲೂ ಕಣ್ಣುಮುಚ್ಚಿಕೊಂಡು 3, 2, 1 ಹೀಗೆ ಸೇಕಡಾವಾರು ತೆರಿಗೆ ಹಾಕಿ ಮಾರಾಟಕರ ಹೆಚ್ಚಿಸುವುದರ ಪರಿಣಾಮವೇನಾಗುತ್ತದೆ ಬೆಲೆಗಳು ಹೇಗೆ ಏರಿಹೋಗುತ್ತವೆ ಎಂದು ವಿಚಾರಮಾಡದೆ ಹೋದರೆ ಜನತೆಗೆ ಬಹಳ ಕಷ್ಟವಾಗುತ್ತದೆ, ಕೊಳ್ಳುವ ಶಕ್ತಿ ಇನ್ನೂ ಕುಗ್ಗುತ್ತದೆ. ಜನರ ಆರ್ಥಿಕಸ್ಥಿತಿಯೆಲ್ಲಾ ಕುಸಿದುಬೀಳುತ್ತದೆ. ಇದು ತೆರಿಗೆ ಬೆಳೆಯುವುದರ ಪರಿಣಾಮ. ಆದುದರಿಂದ ಈ ವಿಷಯವನ್ನು ಆಮೂಲಾಗ್ರವಾಗಿ ಪರಿಶೀಲಿಸಬೇಕು, ಸಭೆಯಮುಂದೆ ಮಾನ್ಯ ಸಚಿವರೇ ಹೇಳಿದ ಹಾಗೆ ಆದಷ್ಟು ಬಾಕಿ ಉಳಿದಿರುವ ಹಣವನ್ನು ವಸೂಲುಮಾಡಬೇಕು. ಜಮೀನು ಕಂದಾಯ ಅರಣ್ಯದ ಬಾಬತು ರೆವೆನ್ಯೂ, ಅಬ್ಕಾರಿ, ಸೇಲ್ಸ್ ಟಾಕ್ಸ್, ಇನ್‌ಕಂ ಟ್ಯಾಕ್ಸ್ ಮುಂತಾದ ತೆರಿಗೆಗಳ ಬಾಕಿ ಬಹಳವಾಗಿದೆ. ಅವನ್ನೆಲ್ಲಾ ವಸೂಲು ಮಾಡಿದರೆ 5 ಕೋಟಿ ರೂಪಾಯಿಗಳವರೆಗೆ ಹಣ ಬರಲು ಅವಕಾಶವಿದೆ. ಅದನ್ನು ವಸೂಲುಮಾಡಬೇಕು ಮತ್ತು ಈ ಮಸೂದೆಯನ್ನು ಇವತ್ತು ತಾವೇನೋ ಜಾರಿಗೆ ತರಬೇಕೆಂದಿದ್ದೀರಿ, ತಮ್ಮ ಅಂದಾಜಿನ ಪ್ರಕಾರ ಇದರಿಂದ ಮೂರುವರೆ—ನಾಲ್ಕು ಕೋಟಿ ರೂಪಾಯಿ ಬರಬಹುದೆಂದಿದ್ದರೂ ಕನಿಷ್ಠ ಆರರಿಂದ ಎಂಟು ಕೋಟಿ ರೂಪಾಯಿನಷ್ಟು ಬರುತ್ತಧೆ. ಇಷ್ಟು ತೆರಿಗೆಯನ್ನು ಹೆಚ್ಚಿಸಿರುವುದರಿಂದ ದುಷ್ಪರಿಣಾಮವೇನಾಗುತ್ತದೆಂಬುದನ್ನು ಗಮನಿಸಿ ಬಹಳ ಅಸಹನೀಯವಾದ ಈ ಹೊರೆ ಹೇರುವುದಕ್ಕೆ ಮುಂಚೆ ಸರಕಾರದವರು ಪುನರ್ವಿಮರ್ಶೆಮಾಡಿ ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳಿ ಈ ಮಸೂದೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

† SRI K. S. SURYANARAYANA RAO.—Sir, within the time limit I will express myself because the implications are so heavy and so fast that it may not be possible for me to go to details though I very much like to do so. I will refer to one or two things which show how indiscreet this Bill has been and how without second thought, they have tried to get money. For example, they seek to raise in the III schedule by half a per cent. There are certain items over which they can charge ten per cent to fifteen per cent. Half per cent is the uniform rise both for things of common utility and other things. This is because all in a hurry without

looking into the details, they seem to have simply added half a per cent on everything. If this is the point, the cat is out that the Bill has been devised only to see that they get money whether it means any hardship to the commonman or any relief to the common man is no consideration of this Government.

This Act was passed in 1957 after due and careful consideration. These amendments have been introduced during these years. One example I will give here. Take the Second Schedule, Items 1 to 7, in the original Bill. This was a multi-point tax. After mature consideration of the hardship experienced and suffered by the people and every section of the population, this was put to II SCHEDULE, single point, levying 9 per cent tax. It was probably 2 per cent or 3 per cent single-point, but deliberately we made it single-point 9 per cent, to remove the hardship to the trader as also to remove the excessive charges to the consumer. And there is no leakage if it is single-point. This is the reason why, I believe, it was very heavily stressed and considered in this House; and this was debated. Today we are giving a go-bye. Why should we give it up? Take for consideration items 1 to 7 taxable. There may be three hands. We are making multi-point 3 per cent. For arguments sake, we may say : from the mill point to wholesale deal and the consumer and retailer, it is point 1, it may take even many more turns. Four points would be 12 per cent. You are removing this from the Schedule and making a large body of people to account for that. The consequential difficulties that will arise are trading accounts, scrutiny, assessment, harassment, so on and so forth. And to overcome all this, they said, we shall have 9 per cent, single point. Therefore if some little money is absolutely necessary, have it. But I for one am not prepared to accept the enhancement. If for any reason, you want it, you can still do it here. You can rise the tax to 11 or 12 per cent on the single point and collect it from the mill head; thereby you will be saving money on overhead charges and administration charges. By making the tax multi point, you will have to entertain an additional Deputy Commissioner additional Assistant Commissioner and a host of inspecting officers. So, in the next Budget we can be sure of an expenditure under the head Establishment, which will come to another 10 per cent. Why all this? This was discussed threadbare. I know in this very House we have discussed this aspect at private meetings and at Consultative Committee meetings. In spite of all these things being considered very carefully, it is given a go-bye. There is no sound reason given for doing so.

The other point I would like to mention is about exemption. There is no exemption because this is a special Central extra tax. Today, we are working it fresh. There is no exemption for textiles which is supposed to be used by the common man. All right, you do 10 per cent on superfine cloth, on luxury articles of particular value. But what is it we are doing now? We are taxing the coarse cloth, the common man's cloth. As Hon'ble Member Sri Hegde said, when our Ministers will be on tour for

(SRI K. S. SURYANARAYANA RAO)

20 days in the month, they see people with one shirt, not having a second shirt to change. When this is the condition of our people, I do not know how Shri R. S. Hegde says this is a good measure.

The other point I would like to deal is about collection of tax. Take for example Section 18A. Sri Hegde referred to it but he could not pursue, perhaps. With referrence to it, there is a proviso added which says :

> "Provided that no proceedings under this section shall be commenced after a period of five years from the expiry of the year in which the amount has been collected."

Why are you fixing up a limitation to it? Have you anybody in mind to give particular benefit to particular sections of the people? Supposing in 1957, tax has been collected for various things but assessment has not been concluded or collection has not been made for the reason that it is pending in a court of law, in the High Court, or in the Tribunal, or a stay order has been issued. After 5 years have elapsed, the man gets scot free ; and he says : "Look here, I have won the case because the Legislature has given exemption."

I want to speak only on one more point and finish my speech. People will be harassed if Composition is taken away. Composition was deliberately included in the provision because it is these small dealers that will be benefitted by it. Today we take away composition of tax. For what? Is it that our people are educated to make pucca accounts to the satisfaction of the Sales Tax authorities? I will read out Section 26 to make out my case.

MR. SPEAKER.—That point will be explained by the Hon'ble Minister in his reply. The Hon'ble Minister will reply now. The Hon'ble Member has taken more time than I ever intended.

†ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದಿಂದ ಈ ಮಸೂದೆಗೆ ಬಂದಂಥ ಟೀಕೆಯನ್ನು ಕೇಳಿ ನನಗೇನೂ ಆಶ್ಚರ್ಯವಾಗಲಿಲ್ಲ. ಸರ್ಕಾರದ ವತಿಯಿಂದ ಯಾವುದೇ ಒಂದು ಮಸೂದೆಯನ್ನೇ ಆಗಲಿ ಅಥವಾ ಇನ್ನಾವುದಾದರೂ ಒಂದು ಪ್ರಪೋಸಲ್ ಆಗಲಿ ಈ ಸಭೆಯ ಮುಂದೆ ಮಂಡಿಸಿದಾಗ ಅದನ್ನು ವಿರೋಧಿಸುವುದೇ ಅವರ ಕರ್ತವ್ಯ ಎಂದು ಅವರ ಭಾವನೆಯಾಗಿದೆ.

SRI G. V. GOWDA.—Never.

ಶ್ರೀ ರಾಮ ಕೃಷ್ಣಹೆಗಡೆ.—ಅದರಲ್ಲೂ ಹಣಕಾಸಿಗೆ ಸಂಬಂಧಪಟ್ಟ, ತೆರಿಗೆಗೆ ಸಂಬಂಧಪಟ್ಟ ಯಾವುದೇ ಮಸೂದೆಯನ್ನು ನಾವು ಮಂಡಿಸಿದಾಗ ಬಹುಶಃ ಇತಿಹಾಸದಲ್ಲೇ ಅದನ್ನು ಟೀಕೆಮಾಡದೆ ಇದ್ದಂಥಾದ್ದು ಒಂದು ನಿದರ್ಶನವೂ ನಮಗೆ ಕಂಡುಬರಲಾರದು. ಶ್ರೀಮಾನ್ ಗೋಪಾಲ ಗೌಡರು ಕೆಲವು ವಿಚಾರಗಳ ಬಗ್ಗೆ ಹೇಳಿದರು. ಅವರು ನನಗಿಂತ ಹೆಚ್ಚು ಮಳೆಗಾಲವನ್ನು ನೋಡಿದ್ದಾರೆ. ಬಹುಶಃ ನನಗಿಂತ, ಕೆಲವು ವಿಚಾರದಲ್ಲಿ, ಅನುಭವಕೂಡ ಹೆಚ್ಚಾಗಿ ಅವರಿಗೆ ಇರಬಹುದು ಎಂದು ನಾನು ಒಪ್ಪುತ್ತೇನೆ. ಅವರ ಭಾಷಣದಲ್ಲಿ ಈ ಮಸೂದೆಯಲ್ಲಿರತಕ್ಕಂಥ ದೋಷದ ನಿವಾರಣೆಗೆ ಅಥವಾ ಈ ಮಸೂದೆಯನ್ನು ನಾವು ತರದೇ ಇನ್ನಾವುದಾದರೂ ರೀತಿಯಿಂದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಯಾವ ಕ್ರಮವನ್ನು ಕೈಕೊಳ್ಳಬೇಕು ಎಂದು ಹೇಳುವಂತಹ ವಿಚಾರವಾಗಲಿ, ಯಾವ ರಚನಾತ್ಮಕವಾದ ಸಲಹೆಯನ್ನಾಗಲಿ ಅವರು ಮಾಡಲಿಲ್ಲ. ಮಾಡಿದ್ದರೆ ಚೆನ್ನಾಗಿತ್ತು ಎಂದು ನನಗೆ ಅನ್ನಿಸುತ್ತದೆ. ನಾಲ್ಕೈದು ಮುಖ್ಯವಾದ ವಿಚಾರಗಳನ್ನು ಸದಸ್ಯರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಬೇರೆ ಬೇರೆ ಬಾಬುಗಳಿಂದ ಸರಕಾರಕ್ಕೆ ಬರಬೇಕಾದ ಹಣ ಕೊಡದೇ ಇರುವುದರಿಂದ ಬಹಳ ಹಣ ಬಾಕಿ ನಿಂತಿದೆ. ಅದನ್ನು ಮೊದಲು ವಸೂಲ್ಮಾಡಬೇಕು ಎಂದು ಮೂರು ನಾಲ್ಕು ಸದಸ್ಯರು

ಹೇಳಿದ್ದಾರೆ. ಬೇರೆ ಬೇರೆ ಖಾತೆಗೆ ಸಂಬಂಧಪಟ್ಟ ವಿಚಾರದಲ್ಲಿ ಎಷ್ಟೆಷ್ಟು ಹಣ ಬಾಕಿ ನಿಂತಿದೆ ಎಂಬುದನ್ನು ಪ್ರಶ್ನೋತ್ತರ ಕಾಲದಲ್ಲಿ ಹೇಳಿದ್ದೇನೆ. ಒಂದು ವಿಚಾರ ಎಲ್ಲ ಸದಸ್ಯರೂ ಗಮನದಲ್ಲಿಡಬೇಕು. ಈ ಬಾಕಿ ನಿಂತಿರತಕ್ಕ ಎಲ್ಲ ಹಣ ಅತ್ಯಂತ ಕಠಿಣ ಕ್ರಮ ಕೈಕೊಂಡು ವಸೂಲ್ಮಾಡಿದರೂ ಕೂಡ ಅದು ನಮಗೆ ಒಂದು ಹೊಸ ಉತ್ಪನ್ನ ಆಗಲಾರದು. ಹಿಂದಿನ ವರ್ಷದ ಉತ್ಪತ್ತಿನೋಡಿಕೊಂಡು ಮುಂದಿನ ವರ್ಷದ ಬಜೆಟ್ ತಯಾರ್ಮಾಡ ಲಾಗುತ್ತದೆ. ಉತ್ಪತ್ತಿ ಬಾಬಿನಲ್ಲಿ ಬಾಕಿಇದ್ದಹಾಗೆ ಖರ್ಚಿನ ಬಾಬಿನಲ್ಲಿಯೂ ಕೂಡ ಕೆಲವು ಕೆಲಸಗಳ ವಿಚಾರದಲ್ಲಿ ಪೂರ್ತಿ ಹಣ ಕೊಡದೆ ಇನ್ನೂ ಕೊಡಬೇಕಾದ ಹಣ ಉಳಿದಿರತಕ್ಕಂಥ ಉದಾಹರಣೆಗಳಿವೆ. ಆದುದರಿಂದ ಬಾಕಿ ಇದ್ದಂಥ ಹಣ ವಸೂಲ್ಮಾಡಿದರೂ ಕೂಡ ಅದೊಂದು ಹೊಸ ರಿಸೋರ್ಸ್ ಆಗುತ್ತದೆ ಎಂದು ತಿಳಿಯುವುದು ಸಮಂಜಸವಲ್ಲ.

ಇನ್ನು ಎರಡನೆಯದಾಗಿ ಮಾನ್ಯ ಸದಸ್ಯರು ಕೆಲವರು ಇನ್-ಡೈರೆಕ್ಟ್ ಟ್ಯಾಕ್ಸ್ ಬಹಳ ಹೆಚ್ಚಾಗಿದೆ ಅದು ಕೆಟ್ಟದ್ದು ಎಂದು ಹೇಳಿದರು. ಇಂದಿನ ದಿವಸ ಹಣದ ಬೆಲೆ ಕಡಿಮೆಯಾಗುತ್ತಿದೆ. ಸಾಮಾನ್ಯ ಜನರು ಕೊಳ್ಳತಕ್ಕಂಥ ಶಕ್ತಿ ಹಣದ ದೃಷ್ಟಿಯಿಂದ ಕಡಿಮೆಯಾಗುತ್ತಾ ಹೋಗುತ್ತಿದೆ. ಆಸ್ತಿ-ಪಾಸ್ತಿ ಬೆಲೆ ಹೆಚ್ಚಾಗುತ್ತಿದೆ ಎಂದು ಸೂಚಿಸಿದ್ದಾರೆ. ಟ್ಯಾಕೇಷನ್ ಉದ್ದೇಶಗಳಲ್ಲಿ ಎಂದು ಬಹು ಮುಖ್ಯವಾದ ಉದ್ದೇಶ ಅಂದರೆ ಜನತೆಯ ಉತ್ಪತ್ತಿಯಲ್ಲಿ ಹೆಚ್ಚಳವಾದಹಾಗೆ ಈ ಹೆಚ್ಚುವರಿಯನ್ನು ಕ್ಯಾಪಿಟಲ್ ಎಕ್ಸಪೆಂಡಿಚರ್‌ಗೆ ಅಭಿವೃದ್ಧಿ ಕೆಲಸಕ್ಕೆ ಸರಕಾರ ಉಪಯೋಗಿಸಿಕೊಳ್ಳಬೇಕು. ಇದನ್ನು ಸರಿಯಾಗಿ ಮಾಡಬೇಕು. ಇದು ಸರಿಯಾಗಿ ಆಗದೇ ಇದ್ದರೆ ಹಣದ ಬೆಲೆ ಕಡಿಮೆಯಾಗುವುದನ್ನು ತಡೆ ಹಿಡಿಯುವುದು ಸಾಧ್ಯವಾಗುವುದಿಲ್ಲ. ಇದನ್ನು ಈ ಸಂದರ್ಭದಲ್ಲಿ ಮರೆಯಕೂಡದು. ಆದುದರಿಂದ ನಮ್ಮ ಮೂರನೇ ಪಾಂಚವಾರ್ಷಿಕ ಯೋಜನೆಯಲ್ಲಿ ಕೈಕೊಂಡ ಕಾರ್ಯ ಕ್ರಮದಿಂದ ಅನೇಕ ಕ್ಷೇತ್ರಗಳಲ್ಲಿ ಅರ್ಥಿಕ ಚಟುವಟಿಕೆ ಉಂಟಾಗಿದೆ ಮತ್ತು ಉತ್ಪಾದನೆ ಹೆಚ್ಚಾಗಿದೆ. ಇದು ಸರಿಯಾಗಿ ಹಂಚಿಕೆಯಾಗಿದೆಯೇ ಇಲ್ಲವೇ ಎಂಬುದು ಬೇರೆ ವಿಚಾರ. ಅದನ್ನು ಚರ್ಚೆ ಮಾಡುವುದಿಲ್ಲ. ಈ ಆರ್ಥಿಕ ಚಟುವಟಿಕೆಯಿಂದ ಪ್ರಾಸ್ಪಾರಿಟಿ ಎಂಬುದು ಏನುಬಂದಿದೆಯೋ ಅದರಿಂದ ಬಂದಂಥ ಉತ್ಪನ್ನದ ಕೆಲವು ಭಾಗವು ಸರಕಾರಕ್ಕೆ ಸಲ್ಲತಕ್ಕಂಥಾದ್ದು ನ್ಯಾಯ. ಅದು ಇಲ್ಲದಿದ್ದರೆ ಹಣದ ಉಬ್ಬರವನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಮುಂದಿನ ಕಾರ್ಯಕ್ರಮ ಸಾಧನೆ ಮಾಡುವುದು ಸಾಧ್ಯವಾಗುವುದಿಲ್ಲ. ಇದಲ್ಲದೆ ಈ ಹೆಚ್ಚುವರಿ ಬಹಳ ಹೆಚ್ಚಾಯಿತು ಎಂಬ ಮತ್ತೊಂದು ವಾದವನ್ನು ಕೆಲವು ಸದಸ್ಯರು ಮಾಡಿದರು.

ಶ್ರೀ ಎಸ್. ಗೋಪಾಲ ಗೌಡ.—ಪರೋಕ್ಷ ತೆರಿಗೆ ಹಾಕುವುದರಿಂದ ಹಣದ ಉಬ್ಬರ ಹೆಚ್ಚಾಗುತ್ತದೆಯೋ ಅಥವಾ ಕಡಿಮೆಯಾಗುತ್ತದೆಯೋ ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಾದ ಎರಡುರೀತಿಯಲ್ಲಿ ಇದೆ. ನನ್ನ ಹೇಳಿಕೆ ಇಷ್ಟೇ. ಉತ್ಪಾದನೆ ಜನರ ಕೈಯಲ್ಲಿ ಹೆಚ್ಚಾದಾಗ್ಗೆ ಅದನ್ನು ಮೋಪ್ ಅಪ್ ಮಾಡದೆ ಇದ್ದರೆ ಅದನ್ನು ದೈನಂದಿನ ಖರ್ಚಿನಲ್ಲಿಸೇರಿಸಿ ವಸ್ತು ಖರೀದಿ ಹೆಚ್ಚು ಹೆಚ್ಚುಮಾಡಿ ಇನ್‌ಫ್ಲೇಶನ್ ಹೆಚ್ಚು ಆಗುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ತೆರಿಗೆದರದ ಬಗ್ಗೆ ಹೆಚ್ಚು ಎಂದು ಹೇಳಿದರು. ಇದನ್ನು ಪ್ರಾರಂಭದಲ್ಲಿ ನಾನು ವಿವರಿಸಿದ್ದೇನೆ. ನಾವು ಅನುಸರಿಸುತ್ತಿರುವ ದರ ಉಚಿತವಾಗಿದೆ, ಮದ್ರಾಸ್, ಆಂಧ್ರ ಮತ್ತು ಕೇರಳ ರಾಜ್ಯಗಳಲ್ಲಿ ಒಂದೇ ರೀತಿಯ ಕಾನೂನು ರಚಿಸ ಲಾಗಿದೆ. ಇದರಲ್ಲಿ ಮಹಾರಾಷ್ಟ್ರ ಸೇರಿರುವುದಿಲ್ಲ. ಯಾಕಂದರೆ, ಅಲ್ಲಿ ಸೇಲ್ಸ್ ಟ್ಯಾಕ್ಸ್ ಸ್ಟ್ರಕ್ಚರ್ ಬೇರೆ ಯಾಗಿದೆ. ಮದ್ರಾಸ್, ಆಂಧ್ರ ಮತ್ತು ಕೇರಳ ಈ ಮೂರು ರಾಜ್ಯಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ನಮ್ಮ ರಾಜ್ಯದಲ್ಲಿರುವ ಕಾಯದೆಯಂತೆ ಕಾಯದೆ ಇದೆ. ಆದುದರಿಂದ ಈ ಮೂರು ರಾಜ್ಯಗಳಲ್ಲಿ ಸಾಮಾನ್ಯವಾಗಿ ದರ ಹೆಚ್ಚೂ ಕಡಿಮೆ ಒಂದೇ ರೀತಿಯ ದರ ಇರಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಹಿಂದೆ ಈ ನಾಲ್ಕು ರಾಜ್ಯಗಳ ಪ್ರತಿನಿಧಿಗಳು ಕೇಂದ್ರ ಸರಕಾರದ ಪ್ರತಿನಿಧಿಕೂಡಿ ಈ ರೀತಿ ಒಂದೇ ದರ ಇರಬೇಕು ಎಂದು ತೀರ್ಮಾನಮಾಡಿದ್ದಾರೆ. ಆ ರಾಜ್ಯಗಳಲ್ಲಿ ಇದೇರೀತಿ ಮಾಡಿದಾಗ್ಗೆ ವಿರೋಧಮಾಡಲಿಲ್ಲ. ನಮ್ಮ ರಾಜ್ಯದಲ್ಲಿ ಏತಕ್ಕೆ ವಿರೋಧ ಮಾಡುತ್ತಾರೆ ಗೊತ್ತಿಲ್ಲ. ಸ್ವಾಭಾವಿಕವಾಗಿ ತೆರಿಗೆ ಕೊಡುವುದು ಎಲ್ಲರಿಗೂ ಅಪ್ರಿಯ ವಾದುದು. ತೆರಿಗೆ ಹೆಚ್ಚಿಸಿದಾಗ್ಗೆ ಯಾವುದಾದರೊಂದು ರೀತಿಯಿಂದ ವಿರೋಧ ಬರುತ್ತದೆ. ಆದರೆ ನಾವು ನಾಲ್ಕನೇ ಯೋಜನೆಯಲ್ಲಿ ಹೆಚ್ಚು ಹೆಚ್ಚು ಕಾರ್ಯಕ್ರಮ ಕೈಕೊಳ್ಳಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಇದಲ್ಲದೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚು ಮಾಡುವ ಹಣದ ಎರಡಕ್ಕಿಂತ ಹೆಚ್ಚು ಪ್ರಮಾಣ ದಲ್ಲಿ ಹಣ ಖರ್ಚು ಮಾಡಬೇಕೆಂದು ಯೋಜನೆ ಹಾಕಿಕೊಂಡಿರುವಾಗ್ಗೆ ಅದಕ್ಕೆ ಬೇಕಾದಂಥ ಹಣವನ್ನುಕೂಡ ಒದಗಿಸತಕ್ಕಂಥಾದ್ದು ನಮ್ಮ ಕರ್ತವ್ಯ. ಆದುದರಿಂದ ಈ ದರವನ್ನು ಹಾಕಿದ್ದೇವೆ.

ಇನ್ನು ಮತ್ತೊಂದು ಅಂಶವನ್ನು ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ಹೇಳಿದರು. ಈಗ ಇರತಕ್ಕ ಎಗ್ಜೆಂಪ್‌ಷನ್ ಲಿಮಿಟ್, ಅದು ಸಾಲದು ಇದಕ್ಕೂ ಹೆಚ್ಚು ಆಗಬೇಕು ಎಂದು ಹೇಳಿದರು. ಶ್ರೀಮಾನ್ ಗೋಪಾಲಗೌಡರು ಕೂಡ ಈ ವಿಚಾರದಲ್ಲಿ ಮಾತನಾಡಿದರು. ಈಗ ಒಬ್ಬ ಅತಿಸಾಮಾನ್ಯ ಅಂಗಡಿ ಅಥವಾ ದುಕಾನ ಇಟ್ಟುಕೊಂಡಿರುವವರಲ್ಲಿ ಸಾಮಾನ್ಯವಾಗಿ ಹೆಚ್ಚು ಓದು ಬರಹ ಕಲಿತಂಥವರು ಇರುವುದಿಲ್ಲ. ಇವರ ಉತ್ಪಾದನೆಕೂಡ ಅಷ್ಟು ದೊಡ್ಡ ಪ್ರಮಾಣದಲ್ಲಿ ಇರುವುದಿಲ್ಲ. ಆದುದರಿಂದ ಈ ವರ್ಗದಲ್ಲಿ ಯಾವ ವ್ಯಾಪಾರಸ್ಥರು ಅಂಗಡಿಕಾರರು ಬರುತ್ತಾರೋ ಅಂಥವರಿಗೆ ಕಾಯದೆ ವಿನಾಯಿತಿ ಕೊಡುವಂಥಾದ್ದು ಯೋಗ್ಯ.

(ಶ್ರೀ ರಾಮಕೃಷ್ಣ ಹೆಗ್ಡೆ)

ಆದಕ್ಕಾಗಿಯೇ ಹಿಂದೆ 7,500 ರೂಪಾಯಿವರೆಗೆ ವ್ಯವಹಾರ ಸೀಮಿತವಾಗಿ ಇಟ್ಟಿದ್ದೆವು. ಈ ಮಿತಿಯನ್ನು ಹತ್ತು ಸಾವಿರ ರೂಪಾಯಿವರೆಗೆ ಏರಿಸುತ್ತೇವೆ. ಇದನ್ನು ಹದಿನೈದು ಅಥವಾ ಮೂವತ್ತು ಸಾವಿರಕ್ಕೆ ಮಿತಿ ಏರಿಸಿದರೆ ಅನೇಕ ದೊಡ, ದೊಡ್ಡ ಅಂಗಡಿಕಾರರು ಇದರಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದುದರಿಂದ ನಾವು ಈಗ ಹತ್ತು ಸಾವಿರ ಮಿತಿ ಮಾಡಿದ್ದೇವೆ. ಇಷ್ಟುಮಾತ್ರ ಹೇಳಿ ಪುನಃ ಈ ಕಾಯಿದೆಗೆ ಈ ಸಭೆ ತನ್ನ ಸಮ್ಮತಿಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

4-30 P. M.

MR. SPEAKER.—The question is :—

"That the Mysore Sales Tax (Amendment) Bill, 1966 be taken into consideration."

The motion was adopted.

Clause 2

SRI G. V. GOWDA.—Sir, I beg to move :—

"That at page 2, item (*b*) shall be deleted and item (*c*) shall be relettered as item (*b*)."

MR. SPEAKER.—Amendment moved :—

"That at page 2, item (*b*) shall be deleted and item (*c*) shall be relettered as item (*b*)."

SRI G. V. GOWDA.—Sir, the explanation in the original Act is sought to be deleted. The explanation reads like this :

"A transfer of goods on hire purchase or other instalment system of payment shall, notwithstanding the fact that the seller etains the title in the goods as security for payment of the price, rbe deemed to be a sale."

We are all aware that 'sale' has been defined in the Transfer of Property Act. If this is deleted, the consequences will be very bad.

MR. SPEAKER.—Transfer of Property Act does not apply to Moveable property.

SRI G. V. GOWDA.—But 'sale' has been defined. Out of care we have put in this explanation for a purpose that there should be no scope for evasion. Certain people sell goods to the ryots on hire purchase system. No doubt they would have collected the sales tax, but the title on the goods would be transferred after the purchaser has repaid the sale amount, which will take 10 or 15 years under the terms andc onditions. If those transactions are not to be treated as sale, naturally there would be no turnover and no scope for assessment at all. The sale will be completed

only after repayment is made, which may take another 20 years. As such there will be no scope to assess against that dealer and there will be lot of scope for evasion. Therefore, I am submitting that explanation (2) must be retained as it is. There is possibility of a person making a transaction saying that he has not sold it and he is not liable to be taxed. I submit that there is no harm in accepting my amendment and retaining the clause as it is.

SRI RAMAKRISHNA HEGDE.—I am unable to accept this amendment. Perhaps the Hon'ble member is not aware that in accordance with the decision of the Supreme Court the Mysore High Court has held that this explanation relating to hire purchase transactions is void. Therefore, we have to delete it.

MR. SPEAKER.—The Supreme Court has held that it is void. Is the Hon'ble member pressing for the amendment ?

SRI G. V. GOWDA. Yes, Sir.

MR. SPEAKER.—The question is :—

"That at page 2, item (*b*) shall be deleted and item (*c*) shall be relettered as item (*b*)."

(*The amendment was negatived*)

MR. SPEAKER.—The Question is :—

"That Clause 2 stand part of the Bill."

(*The motion was adopted*)

Clause 2 was added to the Bill.

CLAUSE 3

SRI GANJI VEERAPPA (Harihar).—Sir, I beg to move :—

"That at page 3, sub-caluse (2) shall be deleted and sub-clauses (3) & (4) shall be renumbered as sub-clauses (2) and (3) respectively."

MR. SPEAKER.—Amendment moved :—

"That at page 3 sub-clause (2) shall be deleted and sub-clauses (3) & (4) shall be renumbered as sub-clauses (2) and (3) respectively."

SRI G. V. GOWDA.—Sir, I beg to move :—

"That at page 3, in item (1) (*c*), sub-item (ii) shall be deleted." Also,

"That at page 3, sub-clause (2) shall be deleted and sub-clause (3) shall be renum bered as sub-clause (2)."

MR. SPEAKER.—Amendments moved :—

"That at page 3, in item (1) (c), sub-item (ii) shall be deleted."

Also

"That at page 3, sub-clause (2) shall be deleted and sub-clause (3) shall be renumbered as sub-clause (2)."

Is the Hon'ble Minister accepting any of these amendments ?

SRI RAMAKRISHNA HEGDE.—I cannot accept amendments of Sri G. V. Gowda. I have no objection to accept the amendment of Sri Ganji Veerappa.

MR. SPEAKER.—The Hon'ble Minister is accepting the amendment of Sri Ganji Veerappa and it includes second amendment of Sri G. V. Gowda to this clause and therefore, Sri G. V. Gowda cannot press for his amendment. Does the House grant him leave to withdraw his amendment.

HON'BLE MEMBER.—Yes.

(The amendment was by leave of the House, withdrawn)

SRI G. V. GOWDA.—Regarding my other amendment the revision is on the turnover relating to gur, pulses including dhals, flour and husks, wheat (including atta, maida, soji and bran, bread, paddy, rice (including parched rice and beaten rice), ragi, jola, maize, bajra, navane, etc. I feel that raising the turnover tax from one to one and a half per cent will have a had repercussion on the prices of the essential commodities, because if it is increased by half a per cent, vertually it amounts to 2 per cent. The Hon'ble Minister may consider this : The Government rate for rice is 80 np. plus one per cent sales tax. If another half a per cent is added, naturally it will be 81½ paise, and the merchant will collect 82 paise. It won't benefit either the State Exchequer or the common man. It will be an additional advantage to the assessee. Therefore, it is better to retain one per cent, because it pertains to the most essential commodities. It is not a matter which stands on a question of prestige. I request the Hon'ble Minister to consider and see that the amendment is accepted.

SRI RAMAKRISHNA HEGDE.—Sir, I am not accepting the amendment.

MR. SPEAKER.—I will put the amendment of Sri G. V. Gowda to the Vote of the House. The question is :—

"That at page 3, in item 1(c), sub-item (ii) shall be deleted."

(The amendment was negatived)

Then I will put the amendment of Ganji Veerappa to the vote of the House. The question is :

"That at page 3, sub-clause (2) shall be deleted and sub-clauses (3) and (4) shall be re-numbered as sub-clauses (2) and (3) respectively".

(The amendment was adopted)

The question is :

" That Clause 3 as amended, stand part of the Bill. "

(*The motion was adopted*)

" Clause 3 as amended, was added to the Bill ".

Clause 4 to 9

Clause (5), there is no amendment. Clause (6) (7), (8), and (9) there are no amendments.

The question is :

" That Clauses 4 to 9, both inclusive, stand part of the Bill ".

(*The motion was adopted*)

Clause 4 to 9, both including were added to the Bill.

Clause 10

There is an amendment. It is not a valid amendment. The amendment of Sri G. V. Gowda is :

" That in clause 10 of the Bill, amendment of Section 26 in sub-section of the Principal Act, proviso shall be deleted. "

This proposition is before this House. Such an amendment is not permitted.

SRI G. V. GOWDA.—The dealers envisaged therein are not the people to maintain accounts. That is why they are given that particular facilities. That is the intention of this House. So this amendment seems to take away the concession. An advantage is given to the assessees under section and that is taken away now by insisting on them to maintain accounts. It results in hardship to the small assessees who take special advantage under section 17, for composition of the tax. That is why the proviso must be retained. The Hon'ble Minister may favourably consider my request. Even under Motor Vehicles' Taxation Act, that concession is there. There is no question of submitting any return and no question of maintaining accounts. There is no reason why a small dealer should be insisted to maintain accounts.

SRI RAMAKRISHNA HEGDE.—I am not accepting this amendment. This is inconsistent.

MR. SPEAKER.—There is no amendment by him. In an amendment, there is nothing like deletion. He could oppose. Amendment means partial modification and not wholesale opposition. I have disallowed the amendment. I have only given him a chance to oppose and say that his position is right and the Hon'ble Minister's position is wrong.

Sri RAMAKRISHNA HEGDE.—This proviso is inconsistent with Section 17 and this proviso reads as follows :

"Provided that a dealer in respect of whom composition of tax has been accepted under section 17, shall not be required to keep and maintain accounts showing the goods sold, supplied or distributed by him."

Even in respect of those people who come under the purview of this composition if we do not insist on maintenance of accounts, then it will be very difficult to see what exactly is the turn over. Below Rs. ten-thousand we have exempted. How to ascertian whether there is any increase in the turn over after year. ? Therefore, I cannot accept this suggestion.

Mr. SPEAKER.—The question is :

"That Clause 10 stand part of the Bill."

(The motion was adopted)

"Clause 10 was added to the Bill."

Clause 11 :

The question is :

"That Clause 11 stand part of the Bill."

(The motion was adopted)

"Clause 11 was added to the Bill."

Clause 12 :

Sri GANJI VEERAPPA.—Sri, I beg to move :

"That at page 5, in sub-clause (4), line 2, for the words "Twelve per cent" the words "Eleven per cent" shall be *substituted.*

"That at page 6, in sub-clause (8), line 2, for the words "Twelve per cent" the words "Eleven per cent" shall be *subsistuted.*

"That at page 7, in sub-clause (25), line 3, for the words "Twelve per cent" the words "Eleven per cent" shall be *substituted.*"

"That at page 8, in sub-clause (30), line, 2, for the words "Twelve per cent" the words "Eleven per cent" shall be *substituted.*"

"That at page 8, in sub-clause (38), line 2 for the words "Twelve per cent" the words "Eleven per cent" shall be *substituted.*"

"That at page 9, sub-clause (46), shall be *deleted* and sub-clause (47) shall be *re-numbered* as sub-clause (46)."

MR. SPEAKER.—Amendments moved.

"That at page 5, in sub-clause (4), line 2, for the words "Twelve percent" the words "Eleven percent" shall be substituted."

"That at page 6, in sub-clause (8), line 2, for the words "Twelve percent" the words "Eleven percent" shall be *substituted*".

"That at page 7, in sub-clause (25), line 3, for the words "Twelve percent" the words "Eleven percent" shall be *substituted*".

"That at page 8, in sub-clause (30), line, 2, for the words "Twelve percent" the words "Eleven percent" shall be substituted.

"That at page 8, in sub-clause (38), line 2 for the words "Twelve percent" the words "Eleven percent" shall be *substituted*.

"That at page 9, sub-clause (46), shall be *deleted* and sub-clause (47) shall be *re-numbered* as sub-clause (46)"

SRI G. V. GOWDA.—Sir, I beg to move.

"That at page 6, sub-clause (14) shall be *deleted*.

"That at page 6, sub-clause (15) shall be *deleted*.

"That at page 7, sub-clause (21) shall be *deleted*.

"That at page 7, sub-clause (22) shall be *deleted*.

MR. SPEAKER.—Amendments moved :

"That at page 6, sub-clause (14) shall be *deleted*.

"That at page 6, sub-clause (15) shall be *deleted*.

"That at page 7, sub-clause (21) shall be *deleted*.

"That at page 7, sub-clause (22) shall be *deleted*.

All these amendments are before the House.

SRI RAMAKRISHNA HEGDE.—I accept all the amendments of Sri Ganji Veerappa.

MR. SPEAKER.—I ask the Hon. Minister whether he is accepting for this reason ; Once it is moved, either it must be withdrawn or voted ? There is nothing like acceptance. I do not want to narrow or limit the scope of the Debate. Does Sri Gowda, want to say anything ?

SRI G. V. GOWDA.—In respect of my amendments, I would only request the Government to consider that it is desirable to retain the existing rate of tax. For the mill yarn, the rate of tax is one per cent ; it is sought to be raised by another half a per cent. So far as thrown silk is concerned, it is well-known that silk industry is deteriorating and if additional taxation burden is placed on it, naturally the situation will be worsened. Therefore, I am submitting, it will not be possible to give fillip to this silk industry, specially when another half a percent tax is

(SRI G. V. GOWDA)

imposed. Likewise, mill yarn, which is commonly used in making this mill cloth, is utilised by the common people. Therefore, it is desirable to retain the existing rate.

Also I have submitted that even in respect of groundnut oil, coconut oil, cotton seed oil, the existing rate must be retained. Then, item 48--chemical fertiliser is a thing which is nowadays required by all the farmers when we are urging for more food production. If it is subjected to higher rate of taxation, naturally, it will have a bad repercussion because our farmers are not sufficiently able to purchase this at high rate. So, I request the hon. Minister to accept these four entries in the II schedule. Sir, I oppose the amendment of Sri Ganji Veerappa. They are all luxury goods. When Government wants to levy more and more tax on luxury goods, his amendment suggests for the reduction from 12 to 11 per cent.

SRI RAMAKRISHNA HEGDE.—Sir, I am afraid, I cannot accept the amendment of Sri G. V. Gowda. The increase that has been suggested is very small. In respect of Sri Ganji Veerapp's amendment, I would like to point out that amendment to this clause and his earlier amendments are linked together. In the earlier amendments it was sought to drop the proviso. Therefore, it means, the increase that has been proposed in this clause is to be reduced from 2 to 1 per cent.

MR. SPEAKER.—I will put the amendments of Sri G. V. Gowda. The question is:

"That at page 6, sub-clause (14) shall be deleted."

(*The amendment was negatived*).

Next amendment ...... The Question is:

"That at page 6, sub-clause 15 shall be deleted"

(*The amendment was negatived*).

The question is:

"That at page 7, sub-clause 21 shall be deleted."

(*The amendment was negatived*).

The question is:

"That at page 7, sub-clause 22 shall be deleted."

(*The amendment was negatived*).

MR. SPEAKER.—Amendment of Sri Ganji Veerappa.

The question is :

" That at page 5, in sub-clause (4), line 2, for the words "Twelve per cent" the words "Eleven per cent" shall be *substituted.*"

(*The amendment was adopted*)

Next amendment, The question is :

" That at page 6, in sub-clause (8) line (2), for the words "Twelve per cent" the words "Eleven per cent" shall be *substituted.*"

(*The amendment was adopted*)

The question is :

" That at page 7, in sub-clause (25), line 3, for the words "Twelve per cent" the words "Eleven per cent" shall be *substituted.*"

(*The amendment was adopted*)

The question is :

" That at page 8, in sub-clause 30, line 2, for the words "Twelve per cent" the words "Eleven per cent" shall be *substituted.*"

(*The amendment was adopted*)

The question is :

" That at page 8, in sub-clause 38, line 2 for the words "Twelve per cent" the words "Eleven per cent" shall be *substituted.*"

(*The amendment was adopted*)

The question is :

" That at page 9, sub-clause 46, shall be deleted and sub-clause 47 be re-numbered as sub-clause 46."

(*The amendment was adopted*)

Now, the Clause, as amended. The question is :

" That Clause 12, as amended, stand part of the Bill."

(*The motion was adopted*)

Clause 12, as amended, was added to the Bill.

Clause 13.

MR. SPEAKER.—Amendment of Sri R. S. Hegde.

SRI R. S. HEGDE (Honnawar).—Sir, I beg to move :

" That at page 9, in sub-clause (2), line 2, for the words "Five per cent" the words "Four per cent" shall be *substituted*."

MR. SPEAKER.—Amendment moved :

" That at page 9, in sub-clause (2), line 2, for the words "Five per cent" the words "Four per cent" shall be *substituted*."

SRI G. V. GOWDA.—Sir, I beg to move :

" That at page 9, in sub-clause (2), line 2 for the words "Five per cent" the words "Two and a half per cent" shall be *substituted*."

MR. SPEAKER.—Amendment moved :

" That at page 9, in sub-clause (2), line 2 for the words "Five per cent" the words "Two and a half per cent" shall be *substituted*."

SRI R. S. HEGDE.—Sir, items in Schedule III where the subject matter is Central Sales-tax Act but the Central Sales-tax Act was struck down by the Supreme Court. Now, if the Central Government brings it in another form, then, we have to pay increased tax from 2 to 3 and it all comes to 8 per cent. Therefore, I have brought this amendment.

SRI G. V. GOWDA.—Sir, I am submitting that arecanut and pepper are essentail articles. Therefore, they are also subjected to the Central Sales-tax Act. I am told that our Government has to refund nearly 2 crores of rupees as a result of the Supreme Court judgement. I do not know what action the Government has taken to suitably amend the Central Sales-tax Act. Lot of people may take advantage of the decision and may make application for refund. Now, when it is subjected to a tax on the purchase and the purchase tax is collected, naturally the selller would have collected the tax from the consumer outside the State. If it is interpretted in that way, I do not think there is any question that they are subjected to taxation twice. It is not the same consumer that pays at the purchase point. In my view, it does not amount to double taxation. So, the Central Sales-tax Act must be suitably amended and thereby the refund must be stopped.

Apart from that, I request the Hon'ble Minister to consider my amendment and accept it because, as I said, they are essential articles. It is not reasonable to raise the rate from 2 to 5 per cent. It is an increase of nearly 150 per cent. You confine at least to half. This must be considered dispassionately and only half a per cent be enhanced on arecanut and pepper.

5-00 P.M.

ಶ್ರೀ ಎಸ್. ಗೋಪಾಲ ಗೌಡ. (ತೀರ್ಥಹಳ್ಳಿ).—ಸ್ವಾಮೀ, ಮೂರನೇ ಷೆಡ್ಯೂಲಿನಲ್ಲಿ ಅಡಕೆ ಹಾಗೂ ಮೆಣಸು ಇವುಗಳ ಮೇಲೆ ಈಗ ಸೇಕಡಾ ಎರಡರಷ್ಟು ಸೇಲ್ಸ್-ಟ್ಯಾಕ್ಸು ಎಂದು ಹಾಕಬೇಕೆಂದಿರುವುದನ್ನು ಸೇಕಡಾ ಐದರಷ್ಟು ಏರಿಸಬೇಕೆಂದು ಏನು ಇಲ್ಲಿ ತಂದಿದ್ದಾರೆ, ಅದು ಸರಿಯಾಗಿಲ್ಲ. ಏಕೆಂದರೆ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಕೇಂದ್ರದ ಮಾರಾಟ ತೆರಿಗೆಯನ್ನು ಕೊಡುವಾಗ ಇದು ಬರುತ್ತದೆ. ಆಗ ಇದೂ ಕೂಡ ತಿದ್ದುಪಡಿಯಾಗಬೇಕಾಗಿ ಬರುತ್ತದೆ. ಇದರಲ್ಲಿ ಒಂದು ವಿವರವನ್ನು ಇಲ್ಲಿ ಹೇಳಬಯಸುತ್ತೇನೆ. ಇವೊತ್ತು ಅಡಕೆ ಬೆಳೆ ಜಾಸ್ತಿಯಾಗಿದೆ ಎಂದರೆ ಐದು ಪೈಸೆಗೆ ಒಂದು ಅಡಕೆ ಉಂಡೆಯದಾದರೆ ಇಲ್ಲವೇ ಹೋಳು ಆಗಿದ್ದರೆ ನಾಲ್ಕು ಹೋಳು ಐದು ಪೈಸೆಗೆ ಮಾರುತ್ತಿದ್ದಾರೆ. ಹಿಂದೆ ದುಡ್ಡು ಇದ್ದಾಗ ಒಂದು ದುಡ್ಡಿಗೆ ನಾಲ್ಕು ಕವಡೆ ಎಂದು ಕೊಡುತ್ತಿದ್ದರು. ಹಾಗೆ ಈಗ ನಾಲ್ಕು ಹೋಳು ಅಡಕೆಗೆ ಐದು ಪೈಸೆಯಂತೆ ಮಾರುತ್ತಿದ್ದಾರೆ. ಅಲ್ಲದೆ ಈಗ ನಮ್ಮ ಹಳ್ಳಿಗಳಲ್ಲಿ ಹಸಿವು ಆದಾಗ ಅಲ್ಲಿರುವ ಹೆಂಗಸರು ಮಕ್ಕಳು ಹಾಗೂ ಇನ್ನಿತರರು ತಿಂಡಿ ತೀರ್ಥ ವೇನೂ ಸಿಗದೇ ಹೋದಾಗ ಒಂದಿಷ್ಟು ಅಡಕೆ ಹಾಗೂ ಎಲೆ ಜೊತೆಗೆ ಸ್ವಲ್ಪ ಹೊಗೆಸೊಪ್ಪು ಉಪಯೋಗಿಸಿ ಅದರಿಂದ ಪರಿಹಾರ ಪಡೆದು ಅವರು ಕೆಲಸಗಳನ್ನು ಮಾಡುತ್ತಾ ಹೋಗುತ್ತಿದ್ದರು. ಏನೋ ತಾವು ಅಡಕೆ ತೋಟದವರು ಹಾಗೂ ಅವರ ಸ್ನೇಹಿತರಾಗಿರುವವರು ಇದ್ದಾರೆ ಎಂದು ಮತ್ತು ಅವರಲ್ಲಿ ಶಕ್ತಿ ಇದೆ ಎಂದು ಮಾಡಬಹುದು. ಆದರೆ ಅವರ ಬಗ್ಗೆ ನಾನು ಇಲ್ಲಿ ಹೇಳುತ್ತಿಲ್ಲ. ಆದರೆ ಇಲ್ಲಿ ತಾವು ಹಿಂದೆ ಷೆಡ್ಯೂಲಿನಲ್ಲಿರುವಂತೆ ಸೇಕಡಾ ಎರಡರಷ್ಟು ಎಂದು ಇದ್ದುದನ್ನು ಸೇಕಡಾ ಐದರಷ್ಟು ಎಂದು ಹೆಚ್ಚು ಮಾಡಲು ತಂದಿರುವುದು ಬಹಳ ಹೆಚ್ಚಿನ ಹೊರೆಯಾಗುತ್ತದೆ. ನಿಷ್ಕಾರಣವಾಗಿ ಏಕೆ ಹೀಗೆ ಮಾಡುತ್ತಾರೆನ್ನುವುದು ತಿಳಿಯುತ್ತಿಲ್ಲ. ಏನೋ ಬಡವರು ಎಲೆ ಅಡಕೆ ಹಾಕಿಕೊಂಡು ಮೋಜು ಮಾಡುತ್ತಾರೆ ಎಂದು ಅದಕ್ಕೆ ಅಡ್ಡಿ ಮಾಡಬೇಕೆಂದು ಈ ರೀತಿ ಮಾಡುತ್ತಿದ್ದಾರೋ ಏನೋ ಗೊತ್ತಾಗುತ್ತಿಲ್ಲ. ಇಲ್ಲಿ ಹೇಳಿರುವಂತೆ ಅಡಕೆ ಹಾಗೂ ಮೆಣಸು ಇವುಗಳ ಮೇಲೆ ಹೆಚ್ಚು ಹೊರೆ ಹಾಕಬೇಕೆಂದು ಮಾಡಿರುವುದರ ಪರಿಣಾಮ ಸರಿಯಾಗುವುದಿಲ್ಲ. ಏಕೆಂದರೆ ಮುಂದೆ ಕೇಂದ್ರದವರು ಅವರ ಮಸೂದೆಯನ್ನು ಬದಲಾವಣೆ ಮಾಡಿದರೆ ಪುನಃ ಆಗ ಇಲ್ಲಿ ಇದನ್ನು ಬದಲಾಯಿಸಬೇಕಾಗುತ್ತದೆ. ಆದುದರಿಂದ ಮಾನ್ಯ ಸಚಿವರು ತೋಟದ ಮಾಲೀಕರೂ ಆಗಿರುವುದರಿಂದ ಅವರಿಗೂ ಅಡಕೆ ಹಾಕುವ ಅಭ್ಯಾಸವಿದೆ ಎಂದು ತೋರುತ್ತದೆ. ಆದುದರಿಂದ ಅವರೂ ಕೂಡ ಸ್ವಲ್ಪ ವಿಚಾರ ಮಾಡಿ ಈಗ ಸೇಕಡ ಐದರಷ್ಟು ಎಂದು ಏರಿಸಬೇಕೆಂದಿರುವುದನ್ನು ಸೇಕಡ ಎರಡರಷ್ಟಕ್ಕೆ ಇಳಿಸುವುದು ಸೂಕ್ತವಾಗಿ ಕಾಣುತ್ತದೆ, ಮತ್ತು ಅವರು ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

SRI RAMAKRISHNA HEGDE.—Sir, items 7 and 8 of Schedule III relate to arecanut and pepper and they are subjected to purchase tax at the rate of 2 per cent at present and they were also subjected to sales tax under the Central Sales Tax Act which has been struck down by the Supreme Court. There it was levied at the rate of 2 per cent. I may also inform the House that in Kerala the rate is at 5 per cent. One important point that was made out by the Hon'ble members was that in case the Central Government validates and in case it is again brought within the purview of the Central Sales Tax Act then the incidence will be too much. I would like to give an assurance to the Hon'ble members that in case this is subjected again to the Central sales-tax, then to that extent relief will be given and it will be exempted.

SRI R. S. HEGDE.—In view of the assurance given by the Minister I beg leave of the House to withdraw my amendment.

MR. SPEAKER.—Has the House its leave to this member to withdraw his amendment?

HON. MEMBERS.—No, No, it may be put to vote.

MR. SPEAKER.—I will put the amendment to the House. The question is :

"That at page 9, in sub-clause (2) line 2 for the words "Five per-cent" the words "Four per cent" shall be substituted.

The amendment was negatived.

MR. SPEAKER.—Now I will put Sri G. V. Gowda's amendment. The question is :

"That at page 9, in sub-clause (2) line 2, for the words "Five per cent" the words "Two and a half per cent" shall be substituted.

The amendment was negatived.

MR. SPEAKER.—The question is :

"That clause 13 stand part of the Bill".

The motion was adopted.

"Clause 13 was added to the Bill"

Clause 1 etc.

MR. SPEAKER.—The question is :

Clause 1, the Title and the Preamble stand part of the Bill.

The motion was adopted.

Clause 1, the Title and the Preamble were added to the Bill.

Motion to Pass.

SRI RAMAKRISHNA HEGDE.—I beg to move:

"That the Mysore Sales Tax (Amendment) Bill, 1966, as amended, be passed."

MR. SPEAKER.—The question is :

"That the Mysore Sales Tax (Amendment) Bill, 1966, as amended, be passed."

The motion was adopted.

Supplementary Demand for grants for 1965-66

(Second Instalment)

ಶ್ರೀ ಎಸ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಹಣಕಾಸಿನ ಸಚಿವರು ಈ ಸಭೆಯ ಮುಂದೆ ಸಪ್ಲಿಮೆಂಟರಿ ಡಿಮ್ಯಾಂಡ್ ಗಳು ಎಂದು ಎರಡನೇ ಸಾರಿ ತಂದು ಇಲ್ಲಿ ಒಪ್ಪಿಗೆಗಾಗಿ ಇಟ್ಟಿದ್ದಾರೆ. ಇದು ಇಲ್ಲಿಗೆ ಮುಕ್ತಾಯವಾಗುವುದಿಲ್ಲ ಎಂದು ಹೇಳಿ ಕೊನೆಯಲ್ಲಿ ನಾವು ಮೂರನೇ ಇನ್ಸ್ಟಾಲ್‌ಮೆಂಟು ಎಂದು ತಂದು ಈ ಸಭೆಯ ಮುಂದೆ ಇಡುತ್ತೇವೆಂದು ಹೇಳುತ್ತಿದ್ದಾರೆ. ಏಕೆಂದರೆ ಮುಂದೆ ಬಡ ನೌಕರರಿಗೆ ಡಿ. ಎ. ಇತ್ಯಾದಿಗಳನ್ನು ಕೊಡಬೇಕಾಗಿ ಬರುತ್ತದೆ, ಇವೆಲ್ಲ ಇತ್ಯರ್ಥವಾಗಬೇಕೆಂದು ಹೇಳಿಬಿಟ್ಟಿದ್ದಾರೆ. ಇವುಗಳನ್ನೆಲ್ಲಾ ನೋಡಿದರೆ ನಮ್ಮ ಹಣಕಾಸಿನ ಸಚಿವರಿಗೆ ಹಣ ಕಾಸಿನ ನಿಯಂತ್ರಣವನ್ನು ಸರಿಯಾಗಿ ಮಾಡತಕ್ಕ ಜವಾಬ್ದಾರಿ ಇಲ್ಲ ಎಂದು